**ಕಥೆ**

## ಎಸ್. ದಿವಾಕರ್

ಕಲೆ: ರಾಮಕೃಷ್ಣ ಸಿದ್ರಪಾಲ



# ಮಂಜು

ಇನ್ನೇನು ಚಳಿಗಾಲ ಶುರುವಾಗುವ ಸಮಯ. ಬೆಳಗಿನಲ್ಲಿ ಎದುರಿಗೆ ಬಂದವರು ಕೂಡ ಕಾಣಿಸದಷ್ಟು ಎಲ್ಲ ಕಡೆ ಕವಿದುಕೊಂಡಿರುವ ಮಂಜು. ಪೂರ್ವ ದಿಕ್ಕಿನಲ್ಲಿ ಸದಾ ಕಾಲ ಕಾಣಿಸುತ್ತಿದ್ದ ನಂದಿ ಬೆಟ್ಟ ಮಾಯವಾಗಿಬಿಟ್ಟಿತ್ತು. ಅಡುಗೆ ಮನೆಯಲ್ಲಿ ಬಾಲಕೃಷ್ಣನ ಅಮ್ಮ ದೋಸೆ ಹುಯ್ಯುತ್ತ ಆಗಾಗ ತಮ್ಮ ಒದ್ದೆ ಕೂದಲನ್ನು ಒದರಿಕೊಳ್ಳುತ್ತಿದ್ದರು. ಭಗ್ಗೆಂದು ಉರಿಯುತ್ತಿದ್ದ ಒಲೆ. ಕಾವಲಿಯಲ್ಲಿ ಚೊಂಯ್ ಎಂದು ಸುರಿದ ಹಿಟ್ಟು ಸುತ್ತಲೂ ಹರಡಿಕೊಂಡು ದೋಸೆಯಾಗುತ್ತಿತ್ತು. ಬಾಗಿಲ ಒಂದು ಬದಿಗೆ ಮುಂಗಾಲುಗಳನ್ನೂರಿ ಕಣ್ಣುಮುಚ್ಚಿಕೊಂಡು ಕೂತಿದ್ದ ಕಪ್ಪು ಬೆಕ್ಕು ಏನಾದರೂ ಸದ್ದಾದರೆ ಮಾತ್ರ ಕಣ್ಣು ತೆರೆಯುತ್ತಿತ್ತು.

ಸಗಣಿ ಹಾಕಿ ಸಾರಿಸಿದ ನೆಲದಲ್ಲಿ ತೆವಳುತ್ತಿದ್ದ ಒಂದು ವರ್ಷದ ಮಗು ಸ್ಟೀಲ್ ಬಟ್ಟಲೊಂದನ್ನು ನೆಲಕ್ಕೆ ಬಡಿದು ಠಣಠಣವೆನಿಸುತ್ತಿತ್ತು. ಅಲ್ಲೇ ಸ್ವಲ್ಪ ದೂರದಲ್ಲಿ ಕೂತಿದ್ದ ಬಾಲಕೃಷ್ಣ ಅಮ್ಮ ತಟ್ಟೆಯಲ್ಲಿ ತಂದಿಟ್ಟ ದೋಸೆ ತಿನ್ನುತ್ತ, ಇವತ್ತು ಸಿಸ್ಟರ್ ರೋಸಿ ಮಿಸ್ಸು ನಮ್ಮನ್ನ ದೇವನಹಳ್ಳಿಗೆ ಕರಕೊಂಡು ಹೋಗ್ತಾರೆ ಎಂದ. ಗೊತ್ತು. ಹೋದ ವಾರವೇ ನಿಮ್ಮ ಮಿಸ್ಸು ಹೇಳಿದ್ರು ಎಂದರು ಅವನ ಅಮ್ಮ.

ಅದಾಗ ಅವನ ಅಪ್ಪ ರಂಗನಾಥರಾಯರು ಬಾಗಿಲಿನಲ್ಲಿ ಕಾಣಿಸಿಕೊಂಡದ್ದರಿಂದ ಅಡುಗೆ ಮನೆಯಲ್ಲಿ ತುಸು ಕತ್ತಲು ಕವಿದಂತಾಯಿತು. ಸ್ನಾನ ಮಾಡಿಕೊಂಡು ಬಂದಿದ್ದ ಅವರು ಪಾಣಿಪಂಚೆಯಿಂದ ಬೆನ್ನುಜ್ಜಿಕೊಳ್ಳುತ್ತ ದೇವರ ಮಂದಾಸನದ ಮುಂದೆ ಕೂತುಕೊಂಡವರೇ 'ಅಬ್ಬಾ, ಎಂಥ ಚಳಿ. ಹೋದ